ಸ್ಥಾಪನೆ : 1964

# ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

# THE JANATHA CO-OPERATIVE BANK LTD.,

ADMINISTRATIVE OFFICE : # 156, 8th Main Road, 17th Cross, Malleswaram West, Bengaluru-55.

Ph : 080-23442648, 23449450, 23469560, Fax : 080-41281971, E-mail : gm@jcbank.in, managerho@jcbank.in

**ಜೆಸಿಬಿ.ಪ್ರಕ.ಮುಕಾನಿ/218/2026-27** **ದಿನಾಂಕ 03.09.2026**

## ಸುತ್ತೋಲೆ

ದಿನಾಂಕ 09.08.2026 ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ನಿರ್ಣಯಿಸಿದಂತೆ ಸದಸ್ಯರ ಕಲ್ಯಾಣಕ್ಕೆಂದು ಹೊಸದಾಗಿ ಸೃಜಿಸಿರುವ **"ವಿದ್ಯಾನಿಧಿ"** ಯೋಜನೆಯನ್ನು ಅನುಷ್ಠಾನಕ್ಕೆ ತರಲು **ದಿನಾಂಕ 31.08.2026 ರಂದು** ನಡೆದ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದ್ದು ಈ ಯೋಜನೆಯಡಿ ಸದಸ್ಯರಿಗೆ ಸೌಲಭ್ಯವನ್ನು ಒದಗಿಸಲು ಶಾಖೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಗಳು ಈ ಕೆಳಕಂಡಂತಿರುತ್ತದೆ.

1. ವಿದ್ಯಾನಿಧಿ ಯೋಜನೆಯು 2026-27 ರಿಂದ ಜಾರಿಗೆ ಬರಲಿದ್ದು, 2026-27ನೇ ಸಾಲಿನಲ್ಲಿ ತಮ್ಮ ಮಗುವನ್ನು ಒಂದನೇ ತರಗತಿಗೆ ದಾಖಲು ಮಾಡಿರುವ ಸದಸ್ಯ/ಸದಸ್ಯ ದಂಪತಿಗಳು ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.
2. ಈ ಯೋಜನೆಯ ಫಾಲಾನುಭವಿಯಾಗಲು ಬ್ಯಾಂಕಿನ ಸದಸ್ಯತ್ವ ಪಡೆದು ಕನಿಷ್ಟ **ಐದು** ವರ್ಷಗಳಾಗಿರಬೇಕು.
3. ಸದಸ್ಯರ **ಮಗ/ಮಗಳನ್ನು ಒಂದನೇ ತರಗತಿಗೆ** ಸೇರಿಸುವ ಸಂದರ್ಭದಲ್ಲಿ ಒಮ್ಮೆ ಮಾತ್ರ ಪಡೆಯಬಹುದಾಗಿರುತ್ತದೆ.
4. ಒಬ್ಬ ಸದಸ್ಯ/ ಸದಸ್ಯ ದಂಪತಿಗಳು ಒಂದು ಮಗುವಿಗೆ ಮಾತ್ರ ಈ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.
5. ಶಿಕ್ಷಣ ಪ್ರೋತ್ಸಾಹ ನಿಧಿಯಾಗಿ ಒಬ್ಬರಿಗೆ **ರೂ.10,000/-** ಗಳನ್ನು ನೀಡಬಹುದಾಗಿರುತ್ತದೆ.
6. ಸದರಿ ಸೌಲಭ್ಯವನ್ನು ಪಡೆಯಲು **ಮಗುವಿನ ಜನನ ಪ್ರಮಾಣ ಪತ್ರ, ಶಾಲೆಗೆ ದಾಖಲಾತಿ ಮಾಡಿರುವುದಕ್ಕೆ ಪೂರಕ ದಾಖಲೆ, ಮಗುವಿನ ಆಧಾರ್ ಹಾಗೂ ಪೋಷಕರ ಸದಸ್ಯತ್ವದ ಗುರುತಿನ ಚೀಟಿ** ಪಡೆಯತಕ್ಕದ್ದು.
7. ಒಂದು ಕುಟುಂಬದಲ್ಲಿ ದಂಪತಿಗಳಿಬ್ಬರು ಸದಸ್ಯರಾಗಿದ್ದು ವಿದ್ಯಾನಿಧಿ ಸೌಲಭ್ಯವನ್ನು ಪಡೆದಲ್ಲಿ ಕೂಡಲೇ, ಇಬ್ಬರ ಸದಸ್ಯತ್ವದ ಅರ್ಜಿಗಳಲ್ಲೂ ಸೌಲಭ್ಯವನ್ನು ಪಡೆದಿರುವುದನ್ನು ದಾಖಲಿಸತಕ್ಕದ್ದು.
8. **ಒಂದು ಕುಟುಂಬದಲ್ಲಿ ಒಂದು ಮಗುವಿಗೆ ಮಾತ್ರ** ಈ ಸೌಲಭ್ಯವನ್ನು ಒದಗಿಸುವ ಉದ್ದೇಶವಿರುವ ಕಾರಣ ಶಾಖೆಗಳು ಮುನ್ನೆಚ್ಚರಿಕೆ ವಹಿಸಿ ಸೌಲಭ್ಯದ ದುರುಪಯೋಗವಾಗದಂತೆ ನೋಡಿಕೊಳ್ಳತಕ್ಕದ್ದು.

**ಒಂದು ವೇಳೆ ಸದಸ್ಯರು ಒದಗಿಸುವ ದಾಖಲೆಗಳಲ್ಲಿ ಲೋಪ-ದೋಷಗಳು ಕಂಡುಬಂದಲ್ಲಿ ವಿದ್ಯಾನಿಧಿಯನ್ನು ನೀಡುವ ಅಥವಾ ತಿರಸ್ಕರಿಸುವ ಅಧಿಕಾರವು ಆಡಳಿತ ಮಂಡಳಿಯ ವಿವೇಚನೆಗೆ ಒಳಪಟ್ಟಿರುತ್ತದೆ.**

ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿ

Vinoda Ramesh

ಮುಖ್ಯಕಾರ್ಯನಿರ್ವಹಣಾಧಿಕಾರಿ(ಪ್ರಭಾರ)